


# ವಿನೋದಾವಳಿಗಳ ವಿಕ್ಷಿಪ್ತ ಕ್ರೀಡೆ

■ ರೂಪಾ ಕೆ.ಎಂ.

ಆಟ ಆಡುವುದು ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಪೂರಕ. ಸತತವಾಗಿ ಆಟದಲ್ಲಿ ತೊಡಗಿಕೊಳ್ಳುವುದರಿಂದ ದೇಹಕ್ಕೆ ಶಕ್ತಿ ಪೂರೈಕೆಯಾಗುವುದಲ್ಲದೇ ಮನಸ್ಸು ಸುಸ್ಥಿತಿಯಲ್ಲಿರುತ್ತದೆ. ಆದರೆ, ಫಿನ್ಲೆಂಡ್‌ನಂಥ ದೇಶದಲ್ಲಿ ಕೆಲವು ವಿಕ್ಷಿಪ್ತ ಆಟಗಳಿವೆ. ಕೇಳಿದರೆ ಆಶ್ಚರ್ಯಪಡಬೇಕು. ಇಂಥ ಆಟಗಳನ್ನು ಆಡಿ, ಅಲ್ಲಿನ ಜನ ಮನರಂಜನೆಯನ್ನು ಪಡೆಯುತ್ತಿರುವುದಂತೂ ನಿಜ. ಏನವು ಆಟಗಳು ಅಂದಿರಾ? ಓದಿ ನೋಡಿ.

## ಹೆಂಡತಿಯನ್ನು ಹೊತ್ತೊಯ್ಯುವ ಚಾಂಪಿಯನ್‌ಶಿಪ್

ಹೆಂಡತಿಯನ್ನು ಹೊತ್ತೊಯ್ಯುವ ಆಟವೊಂದಿದೆ ಎಂದರೆ ಅನೇಕರು 'ಉಸ್ಸಪ್ಪ' ಎನ್ನಬಹುದು. ಆದರೆ, ಈ ಆಟ 19ನೇ ಶತಮಾನದಿಂದಲೂ ಫಿನ್ಲೆಂಡಿನಲ್ಲಿ ನಡೆಯುತ್ತಿದೆ.

ದರೋಡೆಕೋರ ಹೆರ್ಕೊ ರೋನಕೇನೆನ್ ಮತ್ತು ಆತನ ಸಹಚರರು ನಗ, ನಾಣ್ಯ, ಚಿನ್ನಾಭರಣಗಳೊಂದಿಗೆ ಹುಡುಗಿಯನ್ನು ಕದ್ದು ಹೊತ್ತೊಯ್ಯುತ್ತಿದ್ದರು. ಇದೇ ಮುಂದೆ ಸಂಪ್ರದಾಯವಾಗಿ ರೂಪುಗೊಂಡಿತು. ಸದ್ಯ ಇದು ಚಾಂಪಿಯನ್‌ಶಿಪ್ ಹಂತಕ್ಕೆ ಬಂದು ನಿಂತಿದೆ. ಫಿನ್ಲೆಂಡ್‌ನ ಸೋಂಕಜರ್ವಿ ಎನ್ನುವ ಹಳ್ಳಿಯಲ್ಲಿ ವರ್ಷಕ್ಕೊಮ್ಮೆ ಈ ಪಂದ್ಯಾವಳಿ ನಡೆಯುತ್ತಿದೆ. ಚಾಂಪಿಯನ್ ಆದವರಿಗೆ ಬಹುಮಾನವೇನು ಗೊತ್ತೇ? ಹೆಂಡತಿಯ ತೂಕದಷ್ಟು ಬಿಯರ್!



## ಸೊಳ್ಳೆ ಹೊಡೆಯುವ ಚಾಂಪಿಯನ್‌ಶಿಪ್

ದೊಡ್ಡ ಪ್ರಾಣಿಗಳನ್ನು ಬೇಟೆಯಾಡಿ, ಬೇಟೆಗಾರ ಎನಿಸಿಕೊಳ್ಳಬಹುದು. ಆದರೆ, ಯಃಕಶ್ಚಿತ್ ಸೊಳ್ಳೆ ಹೊಡೆಯುವ ಆಟವೂ ಒಂದಿದೆ. ಬೇಸಿಗೆಯ ಮಂದಗಾಳಿಯಲ್ಲಿ ರಕ್ತಹೀರುವ ಸೊಳ್ಳೆಗಳನ್ನು ಹೊಡೆಯಲು ಫಿನ್ಲೆಂಡ್‌ನ ಉತ್ತರಕ್ಕಿರುವ ಪೆಲ್ಕೊಸೆನ್ನಿಮಿಯಲ್ಲಿ ವರ್ಷಕ್ಕೊಮ್ಮೆ ಚಾಂಪಿಯನ್‌ಶಿಪ್ ನಡೆಯುತ್ತದೆ. ಐದು ನಿಮಿಷದಲ್ಲಿ ಎಷ್ಟು ಸೊಳ್ಳೆ ಹೊಡೆಯುತ್ತಾರೆ ಎನ್ನುವುದನ್ನು ಪರಿಗಣಿಸಿ ಬಹುಮಾನ ನೀಡಲಾಗುತ್ತದೆ. ಐದು ನಿಮಿಷದಲ್ಲಿ 21 ಸೊಳ್ಳೆಗಳನ್ನು ಚಚ್ಚಿಹಾಕಿರುವುದು ಈವರೆಗಿನ ದಾಖಲೆ.

## ಇರುವೆಗೂಡಿನ ಮೇಲೆ ಕೂರುವ ಆಟ

ಮುಳ್ಳು–ಮೊಳೆಗಳ ಮೇಲೆ ಕುಳಿತುಕೊಳ್ಳುವ ಹಟಸಾಧಕರು ನಮ್ಮಲ್ಲಿದ್ದಾರೆ. ಆದರೆ, ಇರುವೆಗೂಡಿನ ಮೇಲೆ ಕೂರುವವರನ್ನು ಕಂಡಿದ್ದೀರಾ? ಫಿನ್ಲೆಂಡ್‌ನ ಹಲವೆಡೆ ಇರುವೆ ಗೂಡಿನ ಮೇಲೆ ಕೂರುವ ಸಾವಿರಾರು ಮಂದಿಯನ್ನು ನೋಡಬಹುದು. ಹೀಗೆ ಕೂರುವುದು ಅಲ್ಲಿ ಮೋಜಿನ ಆಟ. ದೇಶದಾದ್ಯಂತ ಬೇಸಿಗೆಯಲ್ಲಿ ಈ ಆಟ ಆಡಲಾಗುತ್ತದೆ. ಇಬ್ಬರು ಸ್ಪರ್ಧಿಗಳು ಎರಡು ಭಿನ್ನ ಇರುವೆಗೂಡಿನ ಮೇಲೆ ಕುಳಿತುಕೊಳ್ಳುತ್ತಾರೆ. ಯಾರೂ ಹೆಚ್ಚು ಕಾಲ ಕಚ್ಚುವ ಇರುವೆಯನ್ನು ಸಹಿಸಿಕೊಳ್ಳುತ್ತಾರೊ ಅವರು ಬಹುಮಾನ ಪಡೆಯಲು ಅರ್ಹರು.

